## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.236/2022

| | | |
|---|---|---|
| ಸಾಕ್ಷಿದಾರರ ಹೆಸರು | – ತನುಜ | ಸಿಡಬ್ಲ್ಯೂ-2 |
| ಗಂಡನ ಹೆಸರು | – ಚಾಯಕುಮಾರ್ | ಪಿಡಬ್ಲ್ಯೂ-2 |
| ವಯಸ್ಸು | – 22 ವರ್ಷ | |
| ಉದ್ಯೋಗ | – ಮನೆ ಕೆಲಸ | |
| ವಾಸ | – ಕಸವನಹಳ್ಳಿ | |

**ದಿನಾಂಕಃ 06.05.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ಚಾಸಾ.1 ನನ್ನ ತಾಯಿ. ಚಾಸಾ.3 ರಿಂದ 6 ರವರು ನನಗೆ ಗೊತ್ತು. ಆರೋಪಿ ನನ್ನ ತಂದೆ . ಆರೋಪಿ ನನಗೆ ಮತ್ತು ನನ್ನ ತಾಯಿಗೆ ಹೊಡೆದಿಲ್ಲ, ಬಡಿದಿಲ್ಲ, ಜಗಳ ಮಾಡಿಲ್ಲ, ಯಾವುದೇ ವಸ್ತುಗಳಿಂದ ಹೊಡೆದಿಲ್ಲ, ನಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಸಾಕ್ಷಿ ಮಹಜರ್ ನಲ್ಲಿರುವ ಸಹಿ ನೋಡಿ ಗುರುತಿಸಿದ್ದು ಮಹಜರನ್ನು ನಿಪಿ-3 ಎಂದು ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ಅಂದಾಜು ನಮ್ಮ ಮನೆಯ ಬಳಿ ಸಹಿ ಮಾಡಿದ್ದೇನೆ. ಯಾವ ವಿಚಾರಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಪೊಲೀಸರು ಯಾವುದೇ ಕ್ರಮ ಜರುಗಿಸಿಲ್ಲ ಬೇರೆ ಯಾರು ನನ್ನ ಜೊತೆ ಇರಲಿಲ್ಲ. ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

25.11.2021 ರಂದು 11.30 ರ ಸಮಯದಲ್ಲಿ ಹಿರಿಯೂರು ತಾ ಕಸವನಹಳ್ಳಿ ಗ್ರಾಮದ ನಮ್ಮ ಮನೆಯ ಮುಂದಿನ ಅಂಗಳದಲ್ಲಿ ಚಾಸಾ.1 ರವರು ಮತ್ತು ಚಾಸಾ.4 ರವರು

ಮಾತನಾಡುತ್ತಾ ನಿಂತಿದ್ದಾಗ ಆರೋಪಿ ಏನೆ ಸೂಳೆ ಮುಂಡೆ ಭೋಸೂಡಿ ಮುಂಡೆ ಸಿಕ್ಕ ಸಿಕ್ಕವರ ಬಳಿ ಮಾತನಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ಕಟ್ಟಿಗೆಯಿಂದ ತಲೆಗೆ ಹೊಡೆದು ಮೈಕೈಗೆ ಕೈಕಾಲುಗಳಿಂದ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಗಲಾಟೆ ಬಿಡಿಸಲು ಬಂದ ನನಗೂ ಕೈಕಾಲುಗಳಿಂದ ಮೈಕೈಗೆ ಹೊಡೆದು ಆಗ ಮಂಜಮ್ಮ ಮತ್ತು ಮೇದ ಕರಿಯಪ್ಪ ಬಂದು ಗಲಾಟೆ ಬಿಡಿಸಿದರು ಎಂದರೆ ಸರಿಯಲ್ಲ. ಆ ಗಲಾಟೆಯಲ್ಲಿ ಚಾಸಾ.1 ರವರಿಗೆ ಪೆಟ್ಟು ಬಿದ್ದು ರಕ್ತಗಾಯಗಳಾಗಿ ಅವರು ಹಿರಿಯೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಸಣ್ಣ ಪುಟ್ಟ ಗಾಯಗಳಾಗಿದ್ದರಿಂದ ನಾನು ಮನೆಯಲ್ಲಿಯೇ ಉಪಚರಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದು ಹೇಳಿಕೆ ಭಾಗವನ್ನು ನಿಪಿ–4 ಎಂದು ಗುರುತಿಸಲಾಯಿತು.

ದಿಃ25.11.2021 ರಂದು ಸುಮಾರು 4 ರಿಂದ 4.40 ರ ಸಮಯದಲ್ಲಿ ಪೊಲೀಸರು ನನ್ನ ಹಾಗೂ ಚಾಸಾ.5, 6 ರವರ ಸಮಕ್ಷಮ ನಿಪಿ–3 ರಂತೆ ಪಂಚನಾಮೆ ಮಾಡಿ ಇಟ್ಟಿಗೆ ತುಂಡನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಆರೋಪಿ ಮತ್ತು ನಾವು ಈಗ ರಾಜೀ ಮಾಡಿಕೊಂಡಿದ್ದೇವೆ ಎಂದರೆ ನಿಜ. ಆ ಕಾರಣದಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಜಿ ಸಿ ವಕೀಲರಿಂದ–ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು